### ಚಿನ್ನಕ್ಕಾಗಿ ಅಗೆತ

ಕೋಲಾರದ ಸುತ್ತಣ ಚಿನ್ನದ ನಿಕ್ಷೇಪಗಳಿವೆ ಎಂಬುದಕ್ಕೆ ಹರಪ್ಪ–ಮೊಹೆಂಜೊದಾರೋ ನಾಗರಿಕತೆಯ ಕಾಲದಲ್ಲಿ ಇಲ್ಲಿ ನಡೆದಿರುವ ಚಟುವಟಿಕೆಗಳೇ ಪುರಾವೆ ಒದಗಿಸುತ್ತವೆಯಾದರೂ 15–16ನೇ ಶತಮಾನದಲ್ಲಿ ಚಿನ್ನಕ್ಕಾಗಿ ಈ ನೆಲದಲ್ಲಿ ಅಗೆತ ಆರಂಭವಾಗಿರುವುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಟಿಪ್ಪುಸುಲ್ತಾನ್ ಇಲ್ಲಿ ಚಿನ್ನಕ್ಕಾಗಿ ಶೋಧನೆ ಮಾಡಿರುವುದು ಕೂಡ ದಾಖಲಾಗಿದೆ.

ಚಿನ್ನಕ್ಕಾಗಿ ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾಗಳಲ್ಲಿ ಶೋಧ ನಡೆಸಿ ಯಶಕಂಡುಕೊಂಡಿದ್ದ ಬ್ರಿಟಿಷರು ಭಾರತವನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡ ಸ್ವಲ್ಪ ಸಮಯದಲ್ಲಿಯೇ ನಮ್ಮ ಭೂಮಿಯ ಚಿನ್ನದ ನಿಕ್ಷೇಪಗಳತ್ತ ಕಣ್ಣು ನೆಟ್ಟರು.

ಶ್ರೀರಂಗಪಟ್ಟಣ ಯುದ್ಧದಲ್ಲಿ ಗೆದ್ದ ಬ್ರಿಟಿಷರು ಬೆಂಗಳೂರಿಗೆ ರಾಜಧಾನಿ ವರ್ಗಾಯಿಸಲು ನಿರ್ಧರಿಸಿ ಕಂಟೋನ್ಮೆಂಟ್ ಕಟ್ಟಿದ್ದರು. ಆಗ ಸೈನಿಕರಿಗೆ–ಅಧಿಕಾರಿಗಳಿಗೆ ವಿಶ್ರಾಂತಿ ಸಮಯ. ಇವರಿಗೆ ಅನೇಕ ಪ್ರವೃತ್ತಿಗಳಿದ್ದವು. ಶಿಕಾರಿ, ಅನ್ವೇಷಣೆ, ಹಾಡು, ಕುಣಿತ, ಚಿತ್ರಕಲೆ, ಸಾಹಿತ್ಯ ರಚನೆ ಇತ್ಯಾದಿ. ಈ ಸೈನಿಕ ಅಧಿಕಾರಿಗಳಲ್ಲಿ ಒಬ್ಬರಾದ ಲೆ. ಜಾನ್ ವಾರನ್‌ರಿಗೆ ಕೋಲಾರ ಸನಿಹ ಚಿನ್ನದ ಗಣಿಗಳಿದ್ದಾವೆಂಬ ಸುದ್ದಿ ಗೊತ್ತಾಯಿತು.

ವಾರನ್ ಅಲ್ಲೆಲ್ಲಾ ಎಡತಾಕಿದ ಮೇಲೆ ಒಂದಿಷ್ಟು ಮಾಹಿತಿ ಕಲೆಹಾಕಿ ಪುರಾತನ ಗಣಿಗಳನ್ನು ಪತ್ತೆಹಚ್ಚಿ (1804) ಅಲ್ಲಿಂದ ಹೊರತೆಗೆದ ಅದಿರು ತೆಗೆಸಿ ಸೋಸಿ ನೋಡಿದಾಗ ಚಿನ್ನದ ಅಂಶಗಳು ಕಂಡುಬಂದವು. ಇದನ್ನೆಲ್ಲಾ ದಾಖಲಿಸಿ ವಾರನ್ ರಾಯಲ್ ಏಷ್ಯಾಟಿಕ್ ಜರ್ನಲ್‌ಗೊಂದು ಲೇಖನ ಬರೆದರು. ಇದರಲ್ಲಿನ ವಿವರವನ್ನೆಲ್ಲಾ ಓದಿಕೊಂಡ ಮೈಕಲ್ ಲಾವೆಲ್ಲೆ ಇನ್ನೊಮ್ಮೆ ಆ ಪ್ರದೇಶದಲ್ಲಿ ಅಡ್ಡಾಡಿ ಗಣಿ ಚಟುವಟಿಕೆ ನಡೆಸಲು ಪರವಾನಗಿ ತೆಗೆದುಕೊಂಡನಾದರೂ ಹೆಚ್ಚು ಸಮಯ ಗಣಿ ನಡೆಸಲಿಲ್ಲ.

ಲಾವೆಲ್ಲೆ ಮಾರಿದ ಗಣಿ ಹಕ್ಕು ಪಡೆದುಕೊಂಡ ಮದ್ರಾಸ್ ಕಂಪನಿ ಪಾಲುದಾರಿಕೆಯಲ್ಲಿ ಶುರು ಮಾಡಿದ ಸಂಸ್ಥೆ ಕೋಲಾರ ಕನ್‌ಶೇಕ್ಷನರೀಸ್.

ಆಗ ಆಳದ ಗಣಿಗಳಿಂದ ಚಿನ್ನದ ಅದಿರು ತೆಗೆಯುವುದು ಅಷ್ಟು ಸುಲಭವಾಗಿರಲಿಲ್ಲ. ನಾಲ್ಕಾರು ಕಂಪೆನಿಗಳು ಬಂಡವಾಳ ಹೂಡಿ ಚಟುವಟಿಕೆ ಮುಂದುವರೆಸಿದರೂ ಅದು ಲಾಭದಾಯಕವಾಗಿರಲಿಲ್ಲ. ಕೊನೆಗೆ ಜಾನ್‌ಟೇಲರ್ ಕಂಪೆನಿ 1880 ಕೋಲಾರ ಗಣಿಗಳ ಉಸ್ತುವಾರಿ ವಹಿಸಿಕೊಂಡ ಮೇಲೆ ವ್ಯವಸ್ಥಿತ ಗಣಿಗಾರಿಕೆ ಆರಂಭವಾಯಿತು.

ಅಲ್ಲಿಂದ ಪ್ರಾರಂಭಗೊಂಡಿತು ನೋಡಿ ಕೆ.ಜಿ.ಎಫ್. ಗಣಿಗಳಲ್ಲಿ ಸುವರ್ಣ ಕಾಲ. ಗಣಿತಜ್ಞ ಜಾನ್‌ಟೇಲರ್ ಕೋಲಾರ ಗಣಿಗಳಲ್ಲಿ ಚಿನ್ನ ಹೊರತೆಗೆಯುವ ಪೂರ್ಣ ಪ್ರಮಾಣದ ಸಂಸ್ಥೆಯನ್ನು



## ರೋಗ ರುಜಿನಗಳ ನಗರ

ಗಣಿಗಾರಿಕೆ ಇಲ್ಲಿ ಶುರುವಾದಾಗ ಕೆ.ಜಿ.ಎಫ್. ಸಣ್ಣಪುಟ್ಟ ಗುಡ್ಡಗಳಿದ್ದ ಬಂಜರು ಭೂಮಿ. ನೀರಿನ ಆಸರೆಗಳೂ ಇರಲಿಲ್ಲ. ಸಾಂಕ್ರಾಮಿಕ ಕಾಯಿಲೆಗಳು ಆಗಲ್ಲಿ ಸಾಮಾನ್ಯ. ಕುಡಿಯಲು ನೀರೂ ಸಿಗುತ್ತಿರಲಿಲ್ಲ. ಬೇಸಿಗೆ ಕಾಲದಲ್ಲಂತೂ ಪರಿಸ್ಥಿತಿ ಇನ್ನೂ ಗಂಭೀರ.

ಪಾಲಾರ್ ನದಿಯಿಂದ ಬರುವ ನೀರಿಗೆ ಅಡ್ಡಲಾಗಿ ನಿರ್ಮಿಸಿದ್ದ ಬೇತಮಂಗಲ ಕೆರೆಯಿಂದ ಕೆ.ಜಿ.ಎಫ್.ಗೆ ನೀರು ಪೂರೈಕೆ ಆರಂಭವಾದ ಮೇಲೆ ನೀರಿನ ಕೊರತೆ ಸ್ವಲ್ಪ ಕಡಿಮೆಯಾದರೂ ಗಣಿ ಕಾರ್ಮಿಕರಿಗೆ ಇದು ಹೆಚ್ಚು ನೆರವಾಗಲಿಲ್ಲ.

ಸಾಂಕ್ರಾಮಿಕ ರೋಗಗಳು ಸ್ವಲ್ಪ ಕಡಿಮೆಯಾದರೂ ಗಣಿಯೊಳಗೆ ಕೆಲಸ ಮಾಡುವ ಕಾರ್ಮಿಕರು ಹಲವು ಬಗೆಯ ರೋಗಗಳಿಗೆ ತುತ್ತಾಗುತ್ತಿದ್ದರು. ಕೃತಕ ಗಾಳಿ ತೆಗೆದುಕೊಂಡ ಕಾರ್ಮಿಕರಿಗೆ ಹೃದಯ ಸಂಬಂಧಿ ಕಾಯಿಲೆಗಳೇ ಹೆಚ್ಚು. ಅದರಲ್ಲೂ ಸಿಲಿಕಾಸೀಸ್ ಎಂಬ ಮಾರಣಾಂತಿಕ ಕಾಯಿಲೆಯಿಂದ ಅಸು ನೀಗಿದವರು ಹೆಚ್ಚು.

ಹೃದಯವನ್ನು ಜರಡಿಯಂತೆ ತೂತು ತೂತು ಮಾಡುವ ಸಿಲಿಕಾಸಿಸ್ ಕಾಯಿಲೆ ಬಂದರೆ ಅದು ಸಾವಿಗೆ ಆಹ್ವಾನವೆ.



ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.
ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಬೆಂಗಳೂರು ಮೈಸೂರು 9880444450